## ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ, ಮಲ್ಲೇಶ್ವರಂ ಬೆಂಗಳೂರು-560003

### ಪ್ರಥಮ ಭಾಷೆ ಕನ್ನಡ ರಾಜ್ಯಮಟ್ಟದ ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ/ಮಾರ್ಚ್ – 2023 ರ

### ಮಾದರಿ ಉತ್ತರಗಳು

(ಸರ್ಕಾರಿ ಪ್ರೌಢಶಾಲೆ, ನಂಬಿಹಳ್ಳಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.)

---

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. **6X1=6**

1. ಲೋಪ ಸಂಧಿ
2. ವಿವರಣಾತ್ಮಕ ಚಿಹ್ನೆ
3. ತಲೆನೋವು
4. ಅತ್ತಣಂ
5. 5
6. ಸಂಯೋಜಿತ ವಾಕ್ಯ

**II.** ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ. **4X1=4**

7 ಜೋಡುನುಡಿ

8. ತದ್ಧಿತಾಂತ ಬಾವನಾಮ

9 ಅನ್ವರ್ತನಾಮ

10. ಅನುಕರಣಾವ್ಯಯ

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **7X1=7**

11. ಶಬರಿಯು ಮತಂಗಾಶ್ರಮದಲ್ಲಿ ವಾಸವಿದ್ದಳು
12. ''ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ'' ಇಂದಲ್ಲ ನಾಳೆ ಫಲಕೊಡುವವು.
13. : ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಜ್ಞ
14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ 'ಕಳ್ಳತನದ' ಆರೋಪವನ್ನು ಹೊರಿಸಿದನು.
15. ದಿನಪಸುತ ಎಂದರೆ 'ಕರ್ಣ'.
16. ಲವನು ಕುದುರೆಯನ್ನು ಕಟ್ಟಿದ್ದಕ್ಕಾಗಿ ಅರಸರು ಹೊಡೆಯುತ್ತಾರೆಂದು ಮುನಿಸುತರು ಹೆದರಿದರು.
17. ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ **10X2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ತಿಳಿಸಿ.

ಉತ್ತರ : ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾದಳು. ನಂತರ ರಾಮನ ಬಳಿ ಬಂದು ಅವನ ಮೈಯನ್ನು ಮುಟ್ಟಿ ಪಾದಕ್ಕೆ ನಮಸ್ಕರಿಸಿ ಅವನ ಕೈಯನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು. ಪ್ರೀತಿಯಿಂದ ಕಟ್ಟಿದ ಹೂ ಮಾಲೆಯನ್ನು ಅವನ ಕೊರಳಿಗೆ ಹಾಕಿ ತಾನು ತಂದ ಹಣ್ಣನ್ನು ನೀಡುತ್ತಾ ಜಗತ್ತಿನಲ್ಲಿ ಇದರಷ್ಟು ರುಚಿಯಾದ ಹಣ್ಣು ಯಾವುದೂ ಇಲ್ಲ, ಎಂದು ಹೇಳಿ ದನ್ಯಭಾವದಿಂದ ಆನಂದಿಸಿದಳು.

19 ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.

ಉತ್ತರ : ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ, ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ. ಅದು ತರ್ಕವಲ್ಲ, ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

20. ಪುರುಷ ಎಂಬ ಶಬ್ದಕ್ಕಿರುವ ಅರ್ಥವೇನು?

ಉತ್ತರ : ನಮ್ಮೊಳಗಿನ ಆತ್ಮತತ್ತ÷್ವದ ಪ್ರಾಪ್ತಿಯ ಪರಿಯೇ 'ಪುರುಷಾರ್ಥ'. ಅಂದರೆ ತನ್ನನ್ನು ತಾನು ಅರಿಯುವ ಬಗೆಯೇ ಪುರುಷಾರ್ಥ. ಪರಮಾರ್ಥದಲ್ಲಿ ಇರವಿಗೂ ಅರಿವಿಗೂ ವ್ಯತ್ಯಾಸವಿಲ್ಲ. ಹೀಗೆ ಸತ್+ಚಿತ್+ಆನಂದ ಎಂಬ ಇರವು, ಅರಿವು, ನಲವುಗಳ ಅಭಿಜ್ಞಾನವೇ ಪುರುಷಾರ್ಥದ ಅಂತರಂಗ. ಹೀಗಾಗಿಯೇ ಇಲ್ಲಿ ಕಾಣುವ ಪುರುಷ ಎಂಬ ಪದಕ್ಕೆ ಗಂಡು ಎಂಬ ಸಂಕುಚಿತವಾದ ಅರ್ಥ ಸಲ್ಲುವುದಿಲ್ಲ. ಇದೇನಿದ್ದರೂ ಲಿಂಗಾತೀತವಾದ ಆತ್ಮವನ್ನು ಕುರಿತದ್ದು ಇಂಥ ಆತ್ಮವೇ ಪರಬ್ರಹ್ಮ ವಸ್ತುವಾಗಿದೆ.

21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

ಉತ್ತರ : ಧರ್ಮಾಧಿಕರಣರು ವಟವೃಕ್ಷಕ್ಕೆ "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯ, ಆ ಕಾರಣದಿಂದ ನಿನ್ನನ್ನು ಸಾಕ್ಷಿಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೇ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

22. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?

ಉತ್ತರ : ಭಾಷೆ, ಜಾತಿ, ಮತಧರ್ಮಗಳ ಭೇದ ಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಗಳ ಮೂಲಕ ಮನುಜರನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ ಎಂದು ಕವಿ ಹೇಳಿದ್ದಾರೆ.

23. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿರಿ?

ಉತ್ತರ : ಶ್ರೀರಾಮನ ಅಶ್ವಮೇಧ ಕುದುರೆಯು ರಾಜ್ಯವನ್ನು ಸುತ್ತಿ ಬರುತ್ತಿರಲು ಎಲ್ಲ ರಾಜ್ಯಗಳ ಶಕ್ತಿಶಾಲಿಗಳಾದ ಮಹಾರಾಜರುಗಳು ರಾಮನ ಕುದುರೆಯೆಂಬ ಹೆಸರನ್ನು ಕೇಳಿಯೇ ಅದನ್ನು ತಡೆಯಲು ಹೆದರಿದರು. ಕುದುರೆಗೆ ನಮಿಸಿ ಬೀಳ್ಕೊಡುತ್ತಿದ್ದರು. ಹೀಗೆ ರಾಜ್ಯಗಳನ್ನು ಸಂಚರಿಸುತ್ತಾ ಬರುತ್ತಿರುವ ಸುಂದರವಾದ ಅಶ್ವಮೇಧ ಕುದುರೆಯು ವಾಲ್ಮೀಕಿ ಆಶ್ರಮದಲ್ಲಿ ಬೆಳೆದಿದ್ದ ಹಸುರಿಗೆ ಆಸೆಪಟ್ಟು ಆಶ್ರಮಕ್ಕೆ ಬಂದಿತು.

24. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

ಉತ್ತರ : ಗಾಂಧೀಜಿಯವರು ಇಂಗ್ಲೆಂಡ್‌ಗೆ ಹೋಗುವವರೆಗೂ ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಅವಶ್ಯಕ ಅಂಶವಲ್ಲವೆಂದು ಭಾವಿಸಿದ್ದರು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆ ನೋಡಿ ಅವರಿಗೆ ನಾಚಿಕೆಯೂ, ಪಶ್ಚಾತ್ತಾಪವೂ ಆಯಿತು. ಕೆಟ್ಟ ಅಕ್ಷರದ ಬರವಣಿಗೆ ಅಪೂರ್ವ ಶಿಕ್ಷಣದ ಚಿಹ್ನೆ ಎಂದು ಅರಿತರು. ತನ್ನ ಬರವಣಿಗೆಯನ್ನು ತಿದ್ದಿಕೊಳ್ಳಲು ಬಯಸಿದರಾದರೂ ಸುಟ್ಟ ಮಡಕೆಗೆ ಹಸಿ ಮಣ್ಣನ್ನು ಮೆತ್ತಲು ಸಾಧ್ಯವಿಲ್ಲದ ಹಾಗೆ, ಆ ವೇಳೆಗೆ ಕಾಲ ಮೀರಿ ಹೋಗಿತ್ತು. ಅವರು ಉದಾಹರಣೆಯಿಂದ ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕ ಯುವತಿಯರು ತಿಳಿದುಕೊಳ್ಳಲಿ ಎಂದು ಅವರು ಹೇಳಿದ್ದಾರೆ.

25. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

ಉತ್ತರ : ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು, ಅದಕ್ಕೆ ಪರ್ಯಾಯವಾದ ದ್ರಾವಿಡ ಚಳುವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳುವಳಿಯನ್ನು ರೂಪಿಸಿದರು. ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು, ಜಾತಿ, ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿ ಹಿಡಿದರು. ಬ್ರಾಹ್ಮಣೇತರ ಚಳುವಳಿಯನ್ನು ಸಾಂಸ್ಕೃತಿಕ ಚಳುವಳಿಯನ್ನಾಗಿ ಪರಿವರ್ತಿಸಿದರು, ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ ಜಾತಿ, ಲಿಂಗ, ಅಸಮಾನತೆಗಳಿಂದ ಹೊರ ಬಂದು ಸರ್ವಧರ್ಮ ಸಹಿಷ್ಣುತೆಯ ಸಮಾಜ ರೂಪಗೊಳ್ಳಬೇಕು ಎಂಬುದು ಅವರ ಬದುಕಿನ ಧ್ಯೇಯವಾಗಿತ್ತು.

26. ಜನರಲ್ ಡಯಾರನ ಪೈಶಾಚಿಕ ಕೃತ್ಯವನ್ನು ಕುರಿತು ತಿಳಿಸಿ.

ಉತ್ತರ : ಜನರಲ್ ಡಯರ್ ಕ್ರೂರ ಮಾರ್ಗದಿಂದ ಭಾರತೀಯರನ್ನೂ ಬಗ್ಗು ಬಡಿಯಬಹುದೆಂದು ಭಾವಿಸಿದನು. ಒಟ್ಟು 1650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ". ಅಂದು ಪ್ರಾಣ ಕಳೆದುಕೊಂಡವರ ಸಂಖ್ಯೆ ಇದನ್ನು ಖಚಿತಗೊಳಿಸಿತ್ತು.

27. ಪ್ರಾಸ ಬಿಟ್ಟು ಬರೆಯಬೇಕೆಂದಿದ್ದ ಪೈಗಳು ಪ್ರಾಸ ಇಟ್ಟೇ ಬರೆಯಲು ಕಾರಣವೇನು?

ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈಹಾಕಬಾರದು, ಬಲ್ಲವರು ಬೆನ್ನು ತಟ್ಟಿದರೆ ಪ್ರಾಸಬಿತ್ತು ಬರೆಯಬಹುದಿತ್ತು, ಕೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು. ನನ್ನ ಕವಿತೆಯನ್ನು ಕುರಿತು ಯಾರೊಂದಿಗೂ ಕೇಳಬಾರದು, ಯಾರು ಏನಂದರೂ ಮಾಡುವುದನ್ನು ಬಿಡಬಾರದು, ಉತ್ತ ಮೇಲಲ್ಲವೆ ಬಿತ್ತುವ ಯೋಚನೆ? ತಕ್ಕಷ್ಟು ಬರೆದ ಮೇಲಲ್ಲವೇ ಪ್ರಾಸದ ಗೋಜು? ಎಂದು ಯೋಚಿಸಿ ಪ್ರಾಸ ಬಿಟ್ಟು ಬರೆಯಬೇಕೆಂದಿದ್ದ ಪೈಗಳು ಪ್ರಾಸ ಇಟ್ಟೇ ಬರೆಯಲು ಕಾರಣವಾಯಿತು.

V. ಕೆಳಗಿನ ಕವಿಗಳ ಅಥವಾ ಸಾಹಿತಿಗಳ ಜನ್ಮಸ್ಥಳ ಕಾಲ ಕೃತಿ ಮತ್ತು ಬಿರುದು ಅಥವಾ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ **2X3=6**

28. ಡಿ.ಎಸ್.ಜಯಪ್ಪಗೌಡ

**ಡಿ.ಎಸ್. ಜಯಪ್ಪಗೌಡ**ರವರು ಕ್ರಿ.ಶ. 1947 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು. ದಿ. ಸರ್. ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಶಸ್ತಿ ಲಭಿಸಿವೆ.

29. **ಕುವೆಂಪು**

ಕುವೆಂಪು ಕ್ರಿ.ಶ. 1904 ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಜನಿಸಿದನು. ಪಕ್ಷಿಕಾಶಿ, ಕೊಳಲು, ಪಾಂಚಜನ್ಯ, ಜಲಗಾರ ಕಾನೂರು ಹೆಗ್ಗಡತಿ, ಶ್ರೀರಾಮಾಯಣ ದರ್ಶನಂ, ಮುಂತಾದವು ಕುವೆಂಪುರವರಿಗೆ ' **ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ**. ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **1X3=3**

30. ಎತ್ತಣ್ ತು ರಂಗಮಿದು ಪೊಕ್ಕು ಪೊ ದೋಟಮಂ
ತೊತ್ತಳದು ಳಿದುದು ವಾ ಲ್ಮೀಕಿ ಮುನಿ ನಾಥನೇ
ಪೊತ್ತುನಾ ರೈವುದೆಂ ದೆನಗೆ ನೇ ಮಿಸಿ ಪೋದ ನಬ್ಧಿಪಂ ಕರೆಸಲಾ ಗಿ

ಛಂದಸ್ಸು : ವಾರ್ಧಕಷಟ್ಪದಿ

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. **1X3=3**

**31.** ''ರಾಮಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು''

ಅಲಂಕಾರ : ಉಪಮಾಲಂಕಾರ

ಲಕ್ಷಣ :- ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನ) ಪರಸ್ಪರ ಹೋಲಿಕೆಯನ್ನು ತಿಳಿಸುವುದು ಉಪಮಾಲಂಕಾರ.

ಉಪಮೇಯ : ರಾಮಲಕ್ಷ್ಮಣರು

ಉಪಮಾನ : ಅಶ್ವಿನಿ ದೇವತೆಗಳು

ಉಪಮಾವಾಚಕ : ಅಂತೆ

ಸಮಾನಧರ್ಮ : ಶೋಭಿಸು

ಸಮನ್ವಯ : ಇಲ್ಲಿ ಉಪಮೇಯವಾದ ರಾಮಲಕ್ಷ್ಮಣರನ್ನು ಉಪಮಾನವಾದ ಅಶ್ವಿನಿ ದೇವತೆಗಳಿಗೆ ಹೋಲಿಸಲಾಗಿದೆ. ಅಂತೆ ಎಂಬ ಉಪಮಾವಾಚಕವಿದ್ದು ಶೋಭಿಸು ಎಂಬ ಸಮಾನಧರ್ಮ ಇರುವದರಿಂದ ಇದನ್ನು ಉಪಮಾಲಂಕಾರ ಎಂದು ಹೇಳಬಹುದು.

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ **1X3=3**

**32.** ಕೂಡಿ ಬಾಳಿದರೆ ಸ್ವರ್ಗ ಸುಖ.

ಗಾದೆಯ ಮಹತ್ವ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಅರ್ಥ ವಿವರಣೆ : ಎಲ್ಲರೂ ಜೊತೆಗೂಡಿ ಬಾಳಿದರೆ ಅಲ್ಲಿ ಎಲ್ಲವೂ ಸಾಧ್ಯ. ಒಗ್ಗಟ್ಟಿನಲ್ಲಿ ಬಲವಿದೆ. ಆದ ಕಾರಣ ಒಟ್ಟಾಗಿ ಬಾಳಿದರೆ ಸಂತೋಷ ಹೆಚ್ಚಾಗಿ ಸಿಗುತ್ತದೆ. ಬಿಡಿಬಿಡಿಯಾಗಿ ಬದುಕುವುದಕ್ಕಿಂತ ಇಡಿಯಾಗಿ ಬದುಕಿದರೆ ಸ್ವರ್ಗ ಸುಖ ಸಿಗುತ್ತದೆ.ಅಂದು ಅವಿಭಕ್ತ ಕುಟುಂಬದಲ್ಲಿ ಅಜ್ಜಿ, ತಾತ, ಮಕ್ಕಳು ಮೊಮ್ಮಕ್ಕಳು ಎಂದು ಎಲ್ಲರೂ ಹಬ್ಬ ಹರಿದಿನಗಳಲ್ಲಿ ಒಟ್ಟಾಗಿ ಕೂತು ಪರಸ್ಪರ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಿದ್ದರು. ಆದರೆ ಇಂದು ನಾವು ಎಲ್ಲೆಲ್ಲೂ ವಿಭಕ್ತ ಕುಟುಂಬವನ್ನೆ ಕಾಣುತ್ತೇವೆ. ಎಲ್ಲರೂ ಒಟ್ಟಾಗಿ ಜೀವನ ಸಾಗಿಸುವುದರಿಂದ ಸುಖ ಸಿಗುತ್ತದೆ ಎಂದು ಈ ಗಾದೆ ಮಾತು ತಿಳಿಸುತ್ತದೆ.

ಅಥವಾ

ಸತ್ಯಕ್ಕೆ ಸಾವಿಲ್ಲ: ಸುಳ್ಳಿಗೆ ಸುಖವಿಲ್ಲ.

ಗಾದೆಯ ಮಹತ್ವ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಅರ್ಥ ವಿವರಣೆ : ಸತ್ಯವಾದದ್ದು ಯಾವತ್ತು ಸಾಯುವುದಿಲ್ಲ. ಸತ್ಯ,ಧರ್ಮಗಳು ಬೆಲೆಬಾಳುವಂತದ್ದು. ಶಾಶ್ವತವಾದದ್ದು. ಸುಳ್ಳಿಗೆ ಯಾವ ಮರ್ಯಾದೆಯು ಇರುವುದಿಲ್ಲ. ಸತ್ಯದಿಂದಲೇ ದೇವರನ್ನು ಕಂಡವರು ಈ ಭೂಮಿ ಮೇಲಿದ್ದಾರೆ. ಸುಳ್ಳು ನೀರಿನ ಮೇಲಿನ ಗುಳ್ಳೆಯಂತೆ ನಶ್ವರವಾದದ್ದು. ಮಾನವನ ಸುಖ- ಸಂತೋಷಗಳಿಗೆ ಸತ್ಯವೇ ಮೂಲ ಕಾರಣ.

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ **6X3=18**

**33.** ''ಎಂಥ ಪ್ರಖ್ಯಾತ ನಾಟಕಕಾರರನ್ನು ಕಾಲ್ಕೆಳಕ್ಕೆ ಹಾಕಿ ತುಳಿಯುತ್ತಿದ್ದೇನಲ್ಲ?''

ಆಯ್ಕೆ: ಈ ವಾಕ್ಯವನ್ನು ವಿ.ಕೃ ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆಯ್ದ ಲಂಡನ್ ನಗರ' ಎಂಬ ಪಾಠದಿಂದ ಆರಿಸಲಾಗಿದೆ

ಸಂದರ್ಭ : ವಿ. ಕೃ ಗೋಕಾಕ್ ಅವರು ವೆಸ್ಟ್ ಮಿನಿಸ್ಟರ್ ಆಬೆ ಸ್ಮಾರಕ ನೋಡಲು ಹೋದಾಗ ಕವಿಗಳ ಮೂಲೆಯಲ್ಲಿ ಬೆನ್‌ಜಾನ್ಸನ್ ಬಗ್ಗೆ ಒಂದು ಸಣ್ಣ ಕಲ್ಲುಪಾಟಿಯ ಮೇಲೆ ಬರೆದ ಮಾಹಿತಿಯನ್ನು ತುಳಿವಷ್ಟರಲ್ಲಿ ನೋಡಿ ಮೇಲಿನ ಮಾತನ್ನು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಲೇಖಕರು ಬೆನ್‌ಜಾನ್ಸನ್ ಕವಿಯ ಮೇಲಿನ ಗೌರವ ಭಾವನೆಯಿಂದ ಅವರಿಗೆ ಕೊಟ್ಟ ಕಲ್ಲನ್ನು ತುಳಿದು ಬಿಡುತ್ತಿದ್ದೆ ಎಂದು ಆಶ್ಚರ್ಯದಿಂದ ಹೇಳುವುದು ಸ್ವಾರಸ್ಯಪೂರ್ಣವಾಗಿದೆ

34. ''ಸಂಪತ್ತಿಗೆ ಸ್ನೇಹದ ಬಂಧನವಿಲ್ಲ ಕುಲದ ಗುರುತಿಲ್ಲ: ರೂಪದ ಒಲವಿಲ್ಲ''

ಸಂದರ್ಭ :– ಲೇಖಕರು ದುಡ್ಡಿನ ಗುಣಾವಗುಣಗಳನ್ನು ವಿವರಿಸುತ್ತಿರುವಾಗ ಈ ಮೇಲಿನ ವಾಕ್ಯ ಮೂಡಿ ಬಂದಿದೆ.

ಸ್ವಾರಸ್ಯ :– ದುಡ್ಡು ಒಳ್ಳೆಯ ಲಕ್ಷಣವಂತನನ್ನೇ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಅದರ ಚಾಪಲ್ಯಕ್ಕಂತು ಮಿತಿಯೇ ಇಲ್ಲ. ಅದು ಗಂಧರ್ವನಗರದಂತೆ ಕಾಣುತ್ತಿದ್ದಂತೆಯೇ ಕರಗಿ ಬಿಡುತ್ತದೆ ಎಂಬುವುದು ಸ್ವಾರಸ್ಯ ಪೂರ್ಣವಾಗಿದೆ.

35. ''ಚಿನ್ನವಿಲ್ಲದೆ ಬದುಕಬಹುದು; ಅನ್ನವಿಲ್ಲದೆ ಬದುಕಲಾದೀತೆ''

ಆಯ್ಕೆ :– ಈ ಮೇಲಿನ ವಾಕ್ಯವನ್ನು "ಶತಾವಧಾನಿ ಡಾ. ಆರ್ ಗಣೇಶ್" ರವರು ಬರೆದಿರುವ "ಶ್ರೇಷ್ಠ ಭಾರತೀಯ ಚಿಂತನೆಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಯಜ್ಞಸಂಸ್ಕೃತಿಯು ಒಂದು ಅನುಷ್ಠಾನ ಅಗ್ನಿಯಲ್ಲಿ ಯಾವುದಾದರೂ ಆಹಾರಪದಾರ್ಥವನ್ನು ಹಾಕಿದರೆ ಅದನ್ನು ಮತ್ತೆ ಪಡೆದುಕೊಳ್ಳಲು ಸಾಧ್ಯವಿಲ್ಲವೆಂಬುಂದು ಎಲ್ಲರಿಗೂ ತಿಳಿದ ಸತ್ಯ. ವಸ್ತುಸ್ಥಿತಿ. ಹೀಗಿದ್ದರೂ ಅದನ್ನೇ ಮಾಡುವುದಾದರೆ ತನಗೆ ಮರಳಿ ಬರುವುದೆಂಬ ಯಾವುದೇ ನಿಶ್ಚಯ ಇಲ್ಲದಿದ್ದರೂ ಕೂಡಬೇಕೆಂಬ ಜೀವನ ಪಾಠದ ಕಲಿಕೆ ತಾನೆ. "ಮನುಷ್ಯಾಃ ಅನ್ನಗತಪ್ರಾಣಾಃ" ಎಂದು ವೇದ ಹೇಳಿದೆ. ಅನ್ನವಿಲ್ಲದೆ ಬದುಕಲಾದೀತೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ :– ನಮಗೆ ಅವಶ್ಯಕವಾಗಿ ಬೇಕಾದ ಆಹಾರವನ್ನು ನಾವು ಸಾಂಕೇತಿಕವಾಗಿಯಾದರೂ ಅಗ್ನಿಗೆ ಅರ್ಪಿಸುವುದೆಂದರೆ ಅದು ಪ್ರತಿಫಲದ ಅಪೇಕ್ಷೆಯಿಲ್ಲದೆ ತ್ಯಾಗ ಮಾಡುವುದರ ಲಕ್ಷಣ ಎಂದು ಲೇಖಕರು ಹೇಳಿರುವುದು ಸ್ವಾರಸ್ಯವಾಗಿದೆ.

35. '' ಮನ್ವಂತರಗಳ ಭಾಗ್ಯವ ತೆರೆಸಿ''

ಆಯ್ಕೆ :– ಈ ವಾಕ್ಯವನ್ನು "ಅಂಬಿಕಾತನಯದತ್ತ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ "ಗರಿ" ಕವನ ಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಯುಗ–ಯುಗಗಳ ಆಗುಹೋಗುಗಳನ್ನು ಅಳಿಸಿ ಪರಿವರ್ತನೆಯ ಪ್ರಗತಿಗೆ ಸಾಕ್ಷಿಯಾಗಿದೆ ಎಂದು ಹೇಳುವಾಗ ಕವಿ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ :– ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಪರಿವರ್ತನೆಯ ಪ್ರಗತಿಗೆ ಸಾಕ್ಷಿಯಾಗಿದೆ ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

36. ''ಮಾರಿಗೌತಣವಾಯ್ತು ನಾಳಿನ ಭಾರತವು''

ಆಯ್ಕೆ :– ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ನಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :– ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ :– ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

37. "ನೆಲಕಿಜಿವೆನೆಂದು ಬಗೆದಿರೆ ಚಲಕಿಜಿವೆಂ"

ಆಯ್ಕೆ :- ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ "ಸಾಹಸ ಭೀಮ ವಿಜಯ" ಎಂಬ ಕೃತಿಯಿಂದ ಆರಿಸಲಾಗಿರುವ "ಛಲಮನೆ ಮೆಱೆವೆಂ" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :- ಭೀಷ್ಮಾಚಾರ್ಯರು "ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೋ" ಎಂದು ಹೇಳಿದಾಗ ದುರ್ಯೋಧನ "ಅಜ್ಜಾ, ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ" ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ :- ದುರ್ಯೋಧನನು ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ. ಸಂಧಿ ಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ **1X4=4**

**39.** ಕಲುಷಿತವಾದೀ ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡು ಮೇಡುಗಳ
ವಸಂತವಾಗುತ ಮುಟ್ಟೋಣ

ಅಥವಾ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XI.** ಕೆಳಗಿನ ಪದ್ಯ ಭಾಗದ ಸಾರಾಂಶವನ್ನು ಅದರಲ್ಲಿ ಅಡಕವಾಗಿರು ಮೌಲ್ಯದೊಂದಿಗೆ ಬರೆಯಿರಿ. **1X4=4**

**40.** ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಟವರೊಳಾವುದನೀವುದೊ ಕುಂಭಸಂಭವ

ಈ ಪದ್ಯಭಾಗವನ್ನು ರನ್ನ ಬರೆದಿರುವ ''ಸಾಹಸ ಭೀಮ ವಿಜಯ'' ಎಂಬ ಕೃತಿಯಿಂದ ಆರಿಸಲಾಗಿರುವ ''ಛಲಮನೆ ಮೆಱೆವೆಂ'' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

ಸಾರಾಂಶ: ಪರಶುರಾಮನು ದ್ರೋಣನ್ನು ಕುರಿತು "ನನ್ನ ಆಸ್ತಿಯನ್ನು ಬೇಡಿದವರಿಗೆ ಕೊಟ್ಟೆನು.ಭೂಮಂಡಲವನ್ನು ಗುರುವಿಗೆ ಕೊಟ್ಟೆನು.ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೋ ವೇದಶಾಸ್ತ್ರ ಪಾರಂಗತನು.ಹೇಗೆ ಅವನನ್ನು ಸಂತೋಷಪಡಿಸಲಿ? ಎಲೈ ದ್ರೋಣನೇ, ಈಗ ಇದೊಂದು ಬಿಲ್ಲು ಇದೆ. ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದನು.

ಅಡಕವಾಗಿರುವ ಮೌಲ್ಯಗಳು : ಪರಶುರಾಮನ ದಾನಗುಣ ಮಾತುಗಳು ಮೌಲ್ಯಯುತವಾಗಿವೆ ಮೂಡಿಬಂದಿವೆ

**XII.** ಕೆಳಗಿನ ಪ್ರಶ್ನೆಗಳಿಗೆ **8 – 10** ವಾಕ್ಯಗಳಲ್ಲಿ ಉತ್ತರ ಬರೆಯಿರಿ **2X4=8**

**41.** . ಆದರ್ಶ ವ್ಯಕ್ತಿ ದೋಷರಹಿತನಾಗಿರಬೇಕಾಗಿದ್ದು ಮುಖ್ಯ ಏಕೆ ?

ನಮ್ಮಿಂದ ಎಂದೂ ದೂರವಾಗದಂತಹ ಹಾಗೂ ನಾವೂ ಆತನಿಂದ ದೂರ ಹೋಗದಂಥ ವ್ಯಕ್ತಿಯೇ ನಮ್ಮ ಆದರ್ಶ ಆಗಬಲ್ಲನು. ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದು ಸರ್ವಥಾ ಪ್ರಮಾದಾತೀತನೆಂದು ಭಾವಿಸುವೆವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬಲ್ಲನು. ಇಲ್ಲವಾದಲ್ಲಿ ಆದರ್ಶವೆಂದು ಭಾವಿಸಲ್ಪಟ್ಟ ವ್ಯಕ್ತಿಯಿಂದ ಏನಾದರೂ ತಪ್ಪಾದರೆ ನಾವು ಬೇರೊಬ್ಬನನ್ನು ಹುಡುಕಬೇಕಾಗುತ್ತದೆ. ಆ ಎರಡನೆಯವನಲ್ಲಿ ದೋಷ ಕಂಡುಬಂದರೆ ಅವನ

ಬಗ್ಗೆ ಇರುವ ಶ್ರದ್ಧೆ ಸಹ ಹಾರಿ ಹೋಗುವುದು ಸ್ವಾಭಾವಿಕ. ಆಗ ಪುನಃ ನಾವು ಮೂರನೆಯ ವ್ಯಕ್ತಿಯನ್ನು ಹುಡುಕುವಂತೆ ಆದೀತು. ಹೀಗಾದರೆ ನಿತ್ಯವೂನ ಹೊಸ ಹೊಸ ವ್ಯಕ್ತಿಯನ್ನು ಆದರ್ಶಕ್ಕಾಗಿ ಹಡುಕುತ್ತಾ ಹೊರಡಬೇಕಾಗುತ್ತದೆ. ಆದರ್ಶ ವ್ಯಕ್ತಿಯನ್ನು ಕುರಿತು ಯೋಚಿಸುವಾಗ ದೋಷರಹಿತ ವ್ಯಕ್ತಿಯನ್ನಾರಿಸುವುದಷ್ಟೇ ಅಲ್ಲದೆ ನಾವು ಆದರ್ಶವೆಂದು ಭಾವಿಸುವ ಎಲ್ಲ ಗುಣಗಳೂ ಆ ವ್ಯಕ್ತಿಯಲ್ಲಿರಬೇಕು. ಯಾರ ಜೀವನ ಕುಸುಮವು ಪ್ರಸನ್ನವಾಗಿ ಪೂರ್ತಿಯಾಗಿ ಅರಳಿದೆಯೋ ಅಕಲಂಕವಾಗಿದೆಯೋ ನಿರ್ಭಿಡೆಯಿಂದ ಸೂರ್ಯಪ್ರಕಾಶಕ್ಕೆ ಮುಖಮಾಡಿ ನಿಂತಿದೆಯೋ, ಯಾರ ಧ್ಯೇಯವು ಶಾಶ್ವತ ಸತ್ಯವಾಗಿದೆಯೋ ಅಂಥ ವ್ಯಕ್ತಿಯನ್ನೇ ನಾವು ಆದರ್ಶವಾಗಿ ಸ್ವೀಕರಿಸಬೇಕು.

ಅಥವಾ

ತಿಲಕರು ಮತ್ತು ಶಿವಾಜಿಯವರನ್ನು ಜನ ಹೇಗೆ ಸ್ವೀಕರಿಸಿದ್ದಾರೆ? ಈ ಬಗ್ಗೆ ಲೇಖಕರು ಯಾವ ಅಭಿಪ್ರಾಯ ತಳೆದಿದ್ದಾರೆ?

ಉತ್ತರ: ಶಿವಾಜಿ ಮತ್ತು ಲೋಕಮಾನ್ಯ ತಿಲಕರನ್ನು ಸಹ ಅವತಾರಿಗಳ ಪಟ್ಟಿಗೆ ಹಾಕಲಾಗಿದೆ. ಶಿವಾಜಿಯನ್ನು ಶ್ರೀ ಶಂಕರರ ಅವತಾರವೆಂದು ಹೇಳಲಾಗುತ್ತದೆ. 'ಶಿವಚರಿತ್ರೆ'ಯಲ್ಲಿ ಇದರ ಸಮರ್ಥನೆಗಾಗಿ ಒಂದು ಉಲ್ಲೇಖವನ್ನೂ ಸೇರಿಸಲಾಗಿದೆ. ತಿಲಕರು ನಮ್ಮ ಕಾಲದಲ್ಲೇ ಆಗಿಹೋದ ನಾಯಕರು. ಅವರನ್ನು ಒಂದು ಚಿತ್ರದಲ್ಲಿ ಚತುರ್ಭುಜರನ್ನಾಗಿ ಮಾಡಿ, ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಕೊಡಲಾಗಿತ್ತು. ಈ ರೀತಿ ನಮ್ಮ ಮಹಾಪುರುಷರನ್ನು ದೇವತೆಗಳ ಶ್ರೇಣ ಿಗೆ ತಳ್ಳುವುದು ನಿಜಕ್ಕೂ ಅದೆಷ್ಟು ವಿಚಿತ್ರ ಎಂಬ ಅಭಿಪ್ಾ್ರಯವನ್ನು ತಳೆದಿದ್ದಾರೆ.

**42.** ಹಲಗಲಿ ದಂಗೆಗೆ ಕಾರಣವೇನು ? ಬ್ರಿಟಿಷರು ಅದನ್ನು ಹೇಗೆ ನಿಯಂತ್ರಿಸಿತು ?

**1857** ರ ಸಿಪಾಯಿ ದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಯಸ್ತ್ರೀÃಕರಣ ಕಾಯಿದೆಯನ್ನು ಜಾರಿಗೆ ತಂದರು. ಅದರ ಪ್ರಕಾರ ಭಾರತೀಯರು ಬ್ರೀಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು. ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು. ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆಯೆದ್ದರು. ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಮನವೊಲಿಸಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು. ಕೋಪಗೊಂಡ ಕಂಪನಿಯ ಸರಕಾರ ಬೇಡರನ್ನು ಕಂಡಕAದಲ್ಲಿ ಸಾಯಿಸಿತು. ಬೇಡರ ಮುಖಂಡರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೆಯ್ಯಲಾಯಿತು. ಹಲಗಲಿ ಊರನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಹೇಗೆ ಹಲಗಲಿ ದಂಗೆಯನ್ನು ಸರಕಾರ ನಿಯಂತ್ರಿಸಿತು.

ಅಥವಾ

ಹಲಗಲಿ ದಂಗೆಯ ಪರಿಣಾಮವೇನು ?

ಉತ್ತರ : ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಕೆಲವು ಬೇಡರು ತಪ್ಪಿಸಿಕೊಂಡು ಗುಡ್ಡದ ಕಡೆ ಓಡಿದರು. ಅಗಸಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಿದ್ದ ಹೆಬಲಕ ಸಾಹೇಬನು ಜಡಗ ಗುಂಡು ಹೊಡೆದು ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ಕಾರಸಾಹೇಬ ಊರನ್ನು ಲೂಟಿ ಮಾಡಲು ಆದೇಶಿಸಿದನು. ಬ್ರಿಟಿಷ್ ಸೈನಿಕರು ಸಿಡಿಲು ಸಿಡಿಯುವ ಹಾಗೆ ಭರಪೂರವಾಗಿ ಗುಂಡನ್ನು ಸುರಿಸಿದರು. ಬಾಲನು ಕಸರತ್ತಿನಿಂದ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆ ಹರಿಯಿತು. ಹೀಗೆ ಹಲಗಲಿ ಬಂಟರಾದ ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ, ಭೀಮ ಮೊದಲಾದ ಹೋರಾಡಿ ವೀರ ಮರಣವನ್ನಪ್ಪಿದರು. ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದ ಬ್ರಿಟೀಷ್ ದಂಡು ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವ ಕಲ್ಲು – ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ **2+2=4**

**43.**

ಅ) ನಗು ಉಂಟಾಗಲು ಕಾರಣವಾದ ಅಂಶಗಳನ್ನು ತಿಳಿಸಿ.

ನಿಗ್ರೋ ಮನುಷ್ಯರು, ಕುಡುಕರು,ಪರಕಿಯ ವೇಷಭೂಷಣ, ವ್ಯಂಗ್ಯ ಚಿತ್ರದಲ್ಲಿ ಎದ್ದುಕಾಣುವ ಡೊಣ್ಣೆ ಮೂಗು ನಗು ಉಂಟು ಮಾಡುತ್ತವೆ

ಆ) ಮೆಚ್ಚುನಗೆಯ ಲಕ್ಷಣಗಳನ್ನು ತಿಳಿಸಿ.

ಬುದ್ಧದೇವ ನಕ್ಕದ್ದು ಮುಗುಳು ನಗೆ, ಶ್ರೀಕೃಷ್ಣನದು ಸರಸನಗೆ, ಪಂಪಕವಿ ಬೀರಿದುದು ರಸನಗೆ, ಈ ಬಗೆಯ ನಗೆಗಳಲ್ಲಿ ಮಾಧುರ್ಯವಿರುತ್ತದೆ ಅದನ್ನು ಜನತೆ ಮೆಚ್ಚುತ್ತಾರೆ.

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ **1X5=5**

**44..**

| | |
|---|---|
| ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | = 1 |
| ಪತ್ರದ ಒಡಲು, ವಿಷಯ ನಿರೂಪಣೆ | =2 |
| ಮುಕ್ತಾಯ, ಇಂತಿ, ಸಹಿ ಹೊರ ವಿಳಾಸ | = 1 |
| ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | =1 |

ಅಥವಾ

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | = 1 |
| ಪತ್ರದ ಒಡಲು, ವಿಷಯ ನಿರೂಪಣೆ | =2 |
| ವಂದನೆಯೊಂದಿಗೆ ಮುಕ್ತಾಯ, ಇಂತಿ,ಸಳ್ಥ,ದಿನಾಂಕ | = 1 |
| ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | =1 |

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. **1X5=5**

**45.** ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ರಾಷ್ಟ್ರೀಯ ಪೋಷನ ಅಭಿಯಾನ

| | |
|---|---|
| ಪ್ರಸ್ತಾವನೆ/ಪೀಠಿಕೆ/ವಿಷಯ ಪ್ರವೇಶ | =1 |
| ಒಡಲು ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | = 2 |
| ಉಪಸಂಹಾರ/ಮುಕ್ತಾಯ/ವಿಷಯ ಸಮಾಪ್ತಿ | =1 |
| ಭಾಷಾಶೈಲಿಗೆ, ಪದಬಂಧ | =1 |